# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ:10ನೇ ಜೂನ್, 2025**

**ಸಂಖ್ಯೆ: 22**

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ವತಿಯಿಂದ ದಿನಾಂಕ:27.05.2025 ರಂದು ಹೊರಡಿಸಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025(ಅಧ್ಯಾದೇಶ ಸಂಖ್ಯೆ-05) ಹಾಗೂ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ)ಅಧ್ಯಾದೇಶ, 2025(ಅಧ್ಯಾದೇಶ ಸಂಖ್ಯೆ-06)ರ ಪ್ರತಿಗಳನ್ನು **https://erajyapatra. karnataka.gov.in/**ನಲ್ಲಿ ಅಥವಾ ವಿಧಾನ ಪರಿಷತ್ತಿನ ಅಂತರ್ಜಾಲ ತಾಣ **www.kla.kar.nic.in/council/council.htm** ದಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೨೭, ಮೇ, ೨೦೨೫ (ಜ್ಯೇಷ್ಠ , ೦೬, ಶಕವರ್ಷ, ೧೯೪೭)<br>BENGALURU, TUESDAY, 27, MAY, 2025 (JYAISTHA , 06, SHAKAVARSHA, 1947) | ನಂ. ೩೦೮<br>No. 308 |
|---|---|---|

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 34 ಶಾಸನ 2025, ಬೆಂಗಳೂರು, ದಿನಾಂಕ:27.05.2025.**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025 ಇದಕ್ಕೆ 2025 ರ ಮೇ ತಿಂಗಳ 27ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧ್ಯಾದೇಶ ಸಂಖ್ಯೆ :05 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ05 :**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025**

(ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2025ರ ಮೇ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ(

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸುವುದಕ್ಕೆ ಶ್ರೀಘ್ರ ಕ್ರಮವನ್ನು ತೆಗೆದುಕೊಳ್ಳಲು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ, ಈಗ ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿರುತ್ತಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2011ನ್ನು(2011ರ ಕರ್ನಾಟಕ ಅಧಿನಿಯಮ 2) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) ಈಗಾಗಲೇ ಇರುವ (ಎ) ಖಂಡವನ್ನು (ಎಎ) ಎಂಬುದಾಗಿ ಮರುಸಂಖ್ಯೆ ನೀಡತಕ್ಕದ್ದು;

(ii) ಹಾಗೆ ಮರುಸಂಖ್ಯೆ ನೀಡಲಾದ (ಎಎ) ಖಂಡಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎ) "ಆಡಳಿತಾತ್ಮಕ ಹುದ್ದೆಗಳು" ಎಂದರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಜಿಲ್ಲಾ ಶಸ್ತ್ರ ಚಿಕಿತ್ಸಕ, ತರಬೇತಿ ಸಂಸ್ಥೆಗಳ ಪ್ರಾಂಶುಪಾಲ, ಜಂಟಿ ನಿರ್ದೇಶಕ, ಉಪ ನಿರ್ದೇಶಕ, ಜಿಲ್ಲಾ ಮಟ್ಟದ ಕಾರ್ಯಕ್ರಮ ಅಧಿಕಾರಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ದೊಡ್ಡ ಆಸ್ಪತ್ರೆಗಳ ಅಧೀಕ್ಷಕ ಹಾಗೂ ಆಯುಷ್ ಉಪ ನಿರ್ದೇಶಕ ಮತ್ತು ಜಿಲ್ಲಾ ಆಯುಷ್ ಆರೋಗ್ಯಾಧಿಕಾರಿ ಎಂಬುದಾಗಿ ಗುರುತಿಸಲಾದ ಹುದ್ದೆಗಳು;";

(iii) (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) "ಸಕ್ಷಮ ಪ್ರಾಧಿಕಾರಿ" ಎಂದರೆ ಆರೋಗ್ಯ ಅಧಿಕಾರಿಗಳು ಅಥವಾ ಇತರ ಸಿಬ್ಬಂದಿಗಳ ವರ್ಗಾವಣೆಯ ಆದೇಶಗಳನ್ನು ಮಾಡಲು ಸಕ್ಷಮವೆಂದು ನಿಯಮಿಸಬಹುದಾದ ಅಂಥ ಪ್ರಾಧಿಕಾರಿ;

(iv) ಹಾಗೆ ಪ್ರತಿಯೋಜಿಸಲಾದ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(ಸಿಎ) "ಗ್ರೇಟರ್ ಬೆಂಗಳೂರು ಪ್ರದೇಶ" ಎಂದರೆ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36)ರಡಿ ರಚಿಸಲಾದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪರಿಮಿತಿಗಳಲ್ಲಿ ಬರುವ ಪ್ರದೇಶಗಳು;

"(ಸಿಬಿ) "ಮಹತ್ವದ ಖಾಲಿಹುದ್ದೆ" ಎಂದರೆ ನಿಯಮಿಸಬಹುದಾದ ಅಂಥ ಹುದ್ದೆಗಳ ಖಾಲಿ ಸ್ಥಾನಗಳು;";

(v) (ಜೆ) ಖಂಡದಲ್ಲಿ "ನಿರ್ದಿಷ್ಟ ಅವಧಿಗಾಗಿ ಸೃಜಿಸಿದ" ಎಂಬ ಪದಗಳ ತರುವಾಯ "ಅಧಿಸೂಚನೆಯ ಮೂಲಕ ಸರ್ಕಾರವು ಹಾಗೆಂದು ಗುರುತಿಸಲಾದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(vi) (ಎಂ) ಖಂಡದಲ್ಲಿ "ಹಿರಿಯ ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳ ಬದಲಿಗೆ "ಹಿರಿಯ ವಿಶೇಷಜ್ಞ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(vii) (ಎನ್) ಖಂಡದಲ್ಲಿ "ವಿಶೇಷಜ್ಞನಾಗಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳ ಬದಲಿಗೆ "ವಿಶೇಷಜ್ಞ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(viii) ಹಾಗೆ ಪ್ರತಿಯೋಜಿಸಲಾದ (ಎನ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(ಎನ್ಎ) "ವ್ಯಕ್ತಿಗಳ ವಿಶೇಷ ಪ್ರವರ್ಗ" ಎಂದರೆ ನಿಯಮಿಸಬಹುದಾದ ಅಂಥ ವಿಶೇಷ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳು."

**3. ಪ್ರಕರಣ 3ರ ಪ್ರತಿಯೋಜನೆ.-** ಮೂಲ ಅಧಿನಿಯಮದ **3**ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**3. ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಅಥವಾ ಬಡ್ತಿ.-** ಈ ಅಧಿನಿಯಮದಡಿಯಲ್ಲಿ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ಆರಂಭಿಕ ನೇಮಕಾತಿ, ವರ್ಗಾವಣೆ ಅಥವಾ ಮುಂಬಡ್ತಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ನಡೆಸುವ ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ಮಾಡತಕ್ಕದ್ದು:

ಪರಂತು ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ವರ್ಗಾವಣೆಗಳಿಗೆ ಸಂಬಂಧಿಸಿದ ಉಪಬಂಧಗಳು, ಪ್ರಾಜೆಕ್ಟ್ ಹುದ್ದೆಗಳು ಮತ್ತು ಆಡಳಿತಾತ್ಮಕ ಹುದ್ದೆಗಳೆಂದು ಗುರುತಿಸಲಾದ ಹುದ್ದೆಗಳಿಗೆ ಅನ್ವಯಿಸತಕ್ಕದ್ದಲ್ಲ:

ಮತ್ತು ಪರಂತು ಪ್ರಾಜೆಕ್ಟ್ ಮತ್ತು ಆಡಳಿತಾತ್ಮಕ ಹುದ್ದೆಗಳ ಆಯ್ಕೆ ಮತ್ತು ಸ್ಥಳನಿಯುಕ್ತಿಯ ಮಾನದಂಡ ಮತ್ತು ವಿಧಾನವು ನಿಯಮಿಸಬಹುದಾದಂತಿರತಕ್ಕದ್ದು."

**4. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ **4**ನೇ ಪ್ರಕರಣದಲ್ಲಿ, ಪರಂತುಕವನ್ನು ಹೊರತುಪಡಿಸಿ **(2)**ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಗ್ರಾಮೀಣ ಪ್ರದೇಶದಲ್ಲಿ ನಿಯಮಿಸಲಾದಷ್ಟು ವರ್ಷಗಳ ಸೇವೆಯನ್ನು ಸಲ್ಲಿಸದಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಗ್ರಾಮೀಣ ಪ್ರದೇಶದಲ್ಲಿನ ಹುದ್ದೆಗೆ ವರ್ಗಾಯಿಸತಕ್ಕದ್ದು."

**5. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ **5**ನೇ ಪ್ರಕರಣದಲ್ಲಿ, **(2)**ನೇ ಉಪ-ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**(2)** ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರು ಹೊಂದಿರುವಂಥ ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರ ಡಿಪ್ಲೋಮಾದ ತಜ್ಞತೆಗೆ, ಗುರುತಿಸದಿರುವ ಅಂಥ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಥ ವಿಶೇಷಜ್ಞರು ಅಥವಾ ಹಿರಿಯ ವಿಶೇಷಜ್ಞರನ್ನು ಅವರುಗಳು ಹೊಂದಿರುವ ವಿಶೇಷ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಗುರುತಿಸಲಾದ ಹುದ್ದೆಗೆ ವರ್ಗಾವಣೆ ಮಾಡತಕ್ಕದ್ದು:

ಪರಂತು ವಿಶೇಷಜ್ಞರು ಮತ್ತು ಹಿರಿಯ ವಿಶೇಷಜ್ಞರನ್ನು ಪ್ರಾಜೆಕ್ಟ್ ಹುದ್ದೆಗಳು ಮತ್ತು ಆಡಳಿತಾತ್ಮಕ ಹುದ್ದೆಗಳಿಗೆ ನಿಯಮಿಸಬಹುದಾದಂಥ ವಿಧಾನದಲ್ಲಿ ಸ್ಥಳನಿಯುಕ್ತಿಗೊಳಿಸಬಹುದು."

**6. ಪ್ರಕರಣ 6ರ ಪ್ರತಿಯೋಜನೆ.-** ಮೂಲ ಅಧಿನಿಯಮದ **6**ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**6.** ಸಾರ್ವಜನಿಕ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯ ವರ್ಗಾವಣೆ.- **(1)** ಸೇವೆಯಲ್ಲಿರುವ ಮತ್ತು ಗ್ರಾಮೀಣ ಪ್ರದೇಶ, ಎ-ವಲಯ, ಬಿ-ವಲಯ ಅಥವಾ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಯಲ್ಲಿ, ನಿಯಮಿಸಲಾದ ಸಂಖ್ಯೆಯ ನಿರಂತರ ಸೇವೆಯ ವರ್ಷಗಳನ್ನು ಪೂರೈಸಿರುವ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು, ಆ ಪ್ರದೇಶ ಅಥವಾ ಹುದ್ದೆಯಲ್ಲಿ ದೀರ್ಘಾವಧಿಯ ಸೇವೆ ಅಥವಾ ಸೇವಾವಧಿಯಲ್ಲಿರುವ ವ್ಯಕ್ತಿಗಳಿಗೆ ಆದ್ಯತೆಯನ್ನು ನೀಡುವ ಮೂಲಕ ಮತ್ತು ನಿಯಮಿಸಬಹುದಾದ ಅಂಥ ಮಾನದಂಡಗಳು ಅಥವಾ ಮನ್ನಣೆಯನ್ನು **(weightage)** ಪರಿಗಣಿಸಿ, ಈ ಮುಂದಿನ ಕ್ರಮದಲ್ಲಿ, ಎಂದರೆ.-

**(1)** ಗ್ರಾಮೀಣ ಪ್ರದೇಶ;

**(2)** ನಗರ ಪ್ರದೇಶದಲ್ಲಿನ ವಲಯ-ಬಿ:

**(3)** ನಗರ ಪ್ರದೇಶದಲ್ಲಿನ ವಲಯ **–** ಎ; ಮತ್ತು

**(4)** ಗ್ರೇಟರ್ ಬೆಂಗಳೂರು ಪ್ರದೇಶ:

- ಇವುಗಳಲ್ಲಿ ಅದೇ ಪ್ರದೇಶದಲ್ಲಿನ ಮತ್ತೊಂದು ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರಿ ಸಂಸ್ಥೆಗೆ ಅಥವಾ ಯಾವುದೇ ಇತರ ಪ್ರದೇಶ ಅಥವಾ ವಲಯಕ್ಕೆ ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ವರ್ಗಾಯಿಸಬಹುದು:

ಪರಂತು, ವರ್ಷಾವಧಿಯಲ್ಲಿ ಅಂಥ ವರ್ಗಾವಣೆಯ ಒಟ್ಟು ಸಂಖ್ಯೆಯು ಅದೇ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಖ್ಯಾಬಲದ "ಶೇಕಡಾ ಹದಿನೈದರಷ್ಟನ್ನು" ಮೀರತಕ್ಕದ್ದಲ್ಲ:

ಮತ್ತು ಪರಂತು ವಿಶೇಷ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಸರ್ಕಾರವು ವರ್ಗಾವಣೆಗಾಗಿ ಪ್ರತ್ಯೇಕ ಷರತ್ತುಗಳು ಮತ್ತು ವಿನಾಯಿತಿಗಳನ್ನು ನಿಯಮಿಸಬಹುದು:

ಅಲ್ಲದೆ ಪರಂತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಗಾಗಿ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ವಿವಿಧ ಹುದ್ದೆಗಳಲ್ಲಿ ವ್ಯಕ್ತಿಯು ಸಲ್ಲಿಸಿದ ಒಟ್ಟು ನಿರಂತರ ಸೇವೆಯನ್ನು, ಪ್ರಸ್ತುತ ಹುದ್ದೆಯಲ್ಲಿ ವ್ಯಕ್ತಿಯು ಸಲ್ಲಿಸಿದ ಒಟ್ಟು ನಿರಂತರ ಸೇವೆಗಿಂತ ಮಿಗಿಲಾಗಿ ಸೇವಾಕಾಲದ ಅವಧಿಯನ್ನು ಅಳೆಯುವ ಉದ್ದೇಶಕ್ಕಾಗಿ ಲೆಕ್ಕಹಾಕತಕ್ಕದ್ದು:

ಅಲ್ಲದೆ ಪರಂತು **(1)**ನೇ ಉಪ-ಪ್ರಕರಣದ ಅಡಿಯಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಿಂದ ಹೊರಗಡೆಗೆ ವರ್ಗಾಯಿಸಲು ಅರ್ಹರಿರುವ ವ್ಯಕ್ತಿಗಳಿಗೆ ಕೌನ್ಸಿಲಿಂಗ್ ನಡೆಯುವಾಗ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಖಾಲಿ ಹುದ್ದೆಗಳು ಲಭ್ಯವಾಗತಕ್ಕದ್ದಲ್ಲ.

**(2)** ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ಅಮಾನತ್ತಿನಿಂದ ಪೂರ್ವಪದವಿಗೆ ತರುವುದರ **(reinstatement)** ಮೇರೆಗೆ ಅಥವಾ ಶಿಸ್ತು ವಿಚಾರಣೆ ಬಾಕಿಯಿರಿಸಿದ ಅಮಾನತ್ತಿನ ಜಾಗಕ್ಕೆ ಪ್ರತಿಯಾಗಿ ಪ್ರಸ್ತುತ ಹುದ್ದೆಯಿಂದ ಬದಲಾಯಿಸುವ ಮೇರೆಗೆ ಸಕ್ಷಮ ಪ್ರಾಧಿಕಾರವು ಕೌನ್ಸಿಲಿಂಗ್ ಮೂಲಕ ವರ್ಷಾವಧಿಯ ಯಾವುದೇ ಸಮಯದಲ್ಲಿ ಸ್ಥಳನಿಯುಕ್ತಿಗೊಳಿಸತಕ್ಕದ್ದು, ಆದರೆ ಆತನನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಲಯಕ್ಕಿಂತ ಮೇಲಿನ ವಲಯಕ್ಕೆ

ಸ್ಥಳನಿಯುಕ್ತಿಗೊಳಿಸತಕ್ಕದ್ದಲ್ಲ ಹಾಗೂ ಶಿಸ್ತು ಪ್ರಾಧಿಕಾರದ ಆದೇಶಗಳಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಸ್ಥಳನಿಯುಕ್ತಿಯನ್ನು ನಿರ್ಬಂಧಿಸಬಹುದು.

**(3)** ಮಹತ್ವದ ಖಾಲಿಹುದ್ದೆಗಳನ್ನು ತುಂಬಲು ಸರ್ಕಾರವು ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯನ್ನು ವರ್ಷಾವಧಿಯ ಯಾವುದೇ ಸಮಯದಲ್ಲಿ ಕೌನ್ಸಿಲಿಂಗ್ ಇಲ್ಲದೆ ಸ್ಥಳನಿಯುಕ್ತಿಗೊಳಿಸಬಹುದು:

ಪರಂತು ಸ್ಥಳನಿಯುಕ್ತಿಗೊಳಿಸಬೇಕಾದ ವೈದ್ಯಾಧಿಕಾರಿ ಅಥವಾ ಇತರ ಸಿಬ್ಬಂದಿಯು ನಿರ್ದಿಷ್ಟಪಡಿಸಿದ ವಿಶೇಷ ಪ್ರವರ್ಗಗಳ ವಿನಾಯಿತಿಗೊಳಪಟ್ಟು **(1)**ನೇ ಉಪ-ಪ್ರಕರಣದ ಅನುಸಾರ ಸಿದ್ಧಪಡಿಸಿದ ದೀರ್ಘಾವಧಿ ಸೇವಾ ವ್ಯಕ್ತಿಗಳ ಪಟ್ಟಿಯಲ್ಲಿ ಅತ್ಯಂತ ಜೇಷ್ಠರಾಗಿರತಕ್ಕದ್ದು."

**4. ಹೊಸ ಪ್ರಕರಣ 7ಎ ಸೇರ್ಪಡೆ.-** ಮೂಲ ಅಧಿನಿಯಮದ **7**ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**7ಎ. ಅಪೀಲು.-** ಸಕ್ಷಮ ಪ್ರಾಧಿಕಾರದ ಆದೇಶಗಳಿಂದ ಬಾಧಿತನಾದ ಯಾರೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಸರ್ಕಾರವು ನಿಯಮಿಸಬಹುದಾದಂಥ ವಿಧಾನದಲ್ಲಿ ಅದನ್ನು ವಿಲೇವಾರಿ ಮಾಡಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT

## NOTIFICATION

**NO: DPAL 34 SHASANA 2025, BENGALURU, DATED:27.05.2025**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025 ಇದಕ್ಕೆ 2025 ರ ಮೇ ತಿಂಗಳ 27ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:05 ಎಂಬುದಾಗಿ ಪ್ರಕಟಿಸಲು ಹಾಗೂ ಭಾರತ ಸಂವಿಧಾನದ ಅನುಚ್ಛೇದ 348ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಸದರಿ ಅಧ್ಯಾದೇಶದ ಆಂಗ್ಲ ಭಾಷಾಂತರವನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ORDINANCE NO. 05 OF 2025

## THE KARNATAKA STATE CIVIL SERVICES (REGULATION OF TRANSFER OF MEDICAL OFFICERS AND OTHER STAFF) (AMENDMENT) ORDINANCE, 2025

(Promulgated by the Governor of Karnataka in the seventy sixth year of the Republic of India and first published in the Karnataka Gazette Extra-ordinary on the 27th day of May, 2025)

An Ordinance further to amend the Karnataka State Civil Services (Regulation of Transfer of Medical Officers and Other Staff) Act, 2011.

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate an Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-** (1) This Ordinance may be called the Karnataka State Civil Services (Regulation of Transfer of Medical Officers and Other Staff) (Amendment) Ordinance, 2025.

(2) It shall come into force at once.

**2. Amendment of section 2.-** In the Karnataka State Civil Services (Regulation of Transfer of Medical Officers and Other Staff) Act, 2011 (Karnataka Act 2 of 2011) (hereinafter referred as the principal Act), in section 2,-

(i) the existing clause (a), shall be renumbered as clause (aa);

(ii) before clause (aa), as so renumbered, the following shall be inserted, namely:-

"(a) "administrative posts" means post identified as the District Health and Family Welfare Officer, the District Surgeon, the Principal of Training Institutes, the Joint Director, the Deputy Director, the Programme Officer at the district level and the Superintendent of a major hospital of Health and Family Welfare Services and Deputy Director Ayush and District Health officer Ayush:"

(iii) for clause (c), the following shall be substituted, namely:-

"(c) competent authority" means such authority as may be prescribed who is competent to make orders of transfer of a Medical Officer or other staff;

(iv) after clause (c), as so substituted, the following shall be inserted, namely:-

"(ca) "Greater Bengaluru Area" means the areas falling within the limits of the Greater Bengaluru Authority constituted under the Greater Bengaluru Governance Act, 2024 (Karnataka Act 36 of 2025)";

(cb) "critical vacancy" means such vacancies of posts as may be prescribed;";

(v) in clause (j), after the word "tenure" the words "identified as such by the Government by a notification", shall be inserted;

(vi) in clause (m), for the words "working as senior specialist" the words "working in senior specialist cadre" shall be substituted;

(vii) in clause (n), for the words "working as specialist" the words "working in specialist cadre", shall be substituted; and

(viii) after clause (n) as so substituted, the following shall be inserted, namely:-

"(na) "Special category of persons" means persons belonging to such special categories, as may be prescribed."

**3. Substitution of section 3.-** For section 3 of the principal Act, the following shall be substituted, namely:-

**"3. Transfer or promotion to be through counseling.-** The initial appointment, transfer or promotion of a Medical Officer or other staff under the Act, shall be done through a process of counseling conducted in such manner as may be prescribed:

Provided that, the provisions relating to transfers through process of counselling shall not apply to the posts identified as project posts, and administrative posts.

Provided further that the criteria and the manner of selection and posting for the project and administrative posts shall be as may be prescribed."

**4. Amendment of section 4.-** In section 4 of the Principal Act, for sub-section (2) except the proviso, the following shall be substituted, namely:-

"(2) A Medical Officer or other staff who is in service has not served for a prescribed number of years in the rural area shall be transferred to a post in rural area".

**5. Amendment of section 5.-** In section 5 of the Principal Act, for sub-section (2) and the entries relating thereto, the following shall be substituted, namely:-

"(2) Where a specialist or senior specialist who is working in a post which is not identified for the Post Graduate Degree or Post Graduate Diploma specialization shall be transferred to the post identified for the specialised qualification, possessed by him:

Provided that specialist and senior specialist may be posted to the Project posts and administrative posts in such manner as may be prescribed."

**6. Substitution of section 6.-** For section 6 of the Principal Act, the following shall be substituted, namely:-

**"6. Transfer of Medical Officer or Other Staff in public interest.-** (1) A Medical Officer or other staff who is in service and has completed the prescribed number of years of continuous service, in any Government hospital or Government institution in rural area, Zone-A, Zone-B or Greater Bengaluru Area may be transferred through process of counselling to another Government hospital or Government Institution in the same area or zone or to any other area or Zone by giving priority to persons put in longer period of service or tenure in that area or post, and considering such criteria or weightage for the area or zone as may be prescribed, in the following order, namely:-

(1)Rural area;

(2) Zone-B in urban area;

(3) Zone-A in urban area; and

(4) Greater Bengaluru Area:

Provided that, the total number of such transfers during the year shall not exceed "fifteen percent" of the number of the working strength in that cadre:

Provided further that, in respect of persons belonging to special categories, the Government may prescribe separate conditions and exceptions for transfers:

Provided also that, for persons serving in the Greater Bengaluru Area, the total continuous service spent by the person in the Greater Bengaluru Area on different posts shall be counted for the purpose of the length of the tenure rather than the total continuous service spent by person in the current post:

Provided also that, the vacancies in the Greater Bengaluru Area shall not be available during counselling to persons eligible to be transferred out from the Greater Bengaluru Area under sub-section (1).

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(2) A Medical Officer or other Staff, on reinstatement from suspension or on being shifted from the current post in lieu of suspension pending Disciplinary enquiry shall be posted any time during the year through counselling by the competent Authority but shall not be posted to a zone higher than his current working zone and may be restricted for posting within an area as specified in the orders of the Disciplinary Authority.

(3) A Medical Officer or other staff may be posted without counselling by the Government any time during a year to fill a critical vacancy:

Provided that, the medical officer or other staff to be posted shall be the senior most out of the list of long-standing persons prepared as per sub-section (1), subject to the exceptions to special categories as specified."

**7. Insertion of new section 7A.-** After section 7 of the Principal Act, the following shall be inserted, namely:-

> **"7A.Appeal.-** Any person aggrieved by the orders of the competent authority under the provisions of the Act may make an appeal to the Government and the Government may dispose it off in such manner as may be prescribed."

The above translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:05) be published in the official Gazette under Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
the Governor of Karnataka,

**G. Sridhar**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೨೭, ಮೇ, ೨೦೨೫ (ಜ್ಯೇಷ್ಠ , ೦೬, ಶಕವರ್ಷ, ೧೯೪೭)<br>BENGALURU, TUESDAY, 27, MAY, 2025 (JYAISTHA , 06, SHAKAVARSHA, 1947) | ನಂ. ೩೦೯<br>No. 309 |


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

## ಸಂಖ್ಯೆ: ಸಂವ್ಯಶಾಇ 35 ಶಾಸನ 2025, ಬೆಂಗಳೂರು, ದಿನಾಂಕ:27.05.2025.

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಅಧ್ಯಾದೇಶ, 2025 ಇದಕ್ಕೆ 2025 ರ ಮೇ ತಿಂಗಳ 27ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧ್ಯಾದೇಶ ಸಂಖ್ಯೆ : 06 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### 2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ :06

### ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಅಧ್ಯಾದೇಶ, 2025

(ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2025ರ ಮೇ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ(

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸುವುದಕ್ಕೆ ಶೀಘ್ರ ಕ್ರಮವನ್ನು ತೆಗೆದುಕೊಳ್ಳಲು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ, ಈಗ ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿರುತ್ತಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಅಧ್ಯಾದೇಶ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ಅಧಿನಿಯಮ, 2012 (2015ರ ಕರ್ನಾಟಕ ಅಧಿನಿಯಮ 26) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದ ಈಗಾಗಲೇ ಇರುವ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ಗ್ರಾಮೀಣ ಪ್ರದೇಶಗಳಲ್ಲಿನ ಖಾಲಿಸ್ಥಾನಗಳನ್ನು ಆದ್ಯತೆಯ ಮೇಲೆ ತುಂಬತಕ್ಕದ್ದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಖಾಲಿ ಹುದ್ದೆಗಳಿಗಿಂತ ಹೆಚ್ಚಿನ ಅಭ್ಯರ್ಥಿಗಳ ಸಂಖ್ಯೆಯಿರುವ ಸಂದರ್ಭದಲ್ಲಿ ನಗರ ಪ್ರದೇಶಗಳಲ್ಲಿನ ಖಾಲಿಸ್ಥಾನಗಳಿಗೆ ಒಂದು ವರ್ಷದ ಕಡ್ಡಾಯ ಸೇವೆ ಸಲ್ಲಿಸಲು ಅಭ್ಯರ್ಥಿಗಳನ್ನು ಸ್ಥಳನಿಯುಕ್ತಿಗೊಳಿಸುವ ಮೂಲಕ ತುಂಬಬಹುದು."

(ii) (3)ನೇ ಉಪಪ್ರಕರಣದಲ್ಲಿ "ಗ್ರಾಮೀಣ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(iii) (4)ನೇ ಉಪಪ್ರಕರಣದಲ್ಲಿ,-

(ಎ) "ಗ್ರಾಮೀಣ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಬಿ) ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಭ್ಯರ್ಥಿಗಳು ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸಿದ ನಂತರ ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡನೆಗೆ ಮತ್ತು ಅಫಿಡವಿಟ್ ಅಥವಾ ಮುಚ್ಚಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ತತ್ಪರಿಣಾಮಗಳಿಗೆ ಹೊಣೆಯಾಗತಕ್ಕದ್ದು ಎಂದು ಮುಚ್ಚಳಿಕೆ ಅಥವಾ ಅಫಿಡವಿಟ್ಟನ್ನು ಸಲ್ಲಿಸಿದ ಮೇಲೆ, ಅವರಿಗೆ ಕಾನೂನು ರೀತ್ಯಾ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಗಳಲ್ಲಿ ಎಂಡಿ ಅಥವಾ ಎಂಎಸ್ ಅಥವಾ ಫೆಲೋಶಿಪ್‌ನಂತಹ ಉನ್ನತ ವ್ಯಾಸಂಗಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಬಹುದು."

**3. 3ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 3ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**3ಎ. ಆದ್ಯತೆ ಮತ್ತು ವಿನಾಯಿತಿ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 3, 4 ಮತ್ತು 5ನೇ ಪ್ರಕರಣಗಳಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯ ಸೇವೆಗಾಗಿ ಸರ್ಕಾರವು ನಿರ್ದಿಷ್ಟಪಡಿಸಿದ ಅಸ್ತಿತ್ವದಲ್ಲಿರುವ ಖಾಲಿಸ್ಥಾನಗಳನ್ನು ತುಂಬುವಾಗ, ಸರ್ಕಾರಿ ಕೋಟಾ ಸೀಟುಗಳಡಿ ವೈದ್ಯಕೀಯ ಕೋರ್ಸು ಉತ್ತೀರ್ಣರಾದ ಅಭ್ಯರ್ಥಿಗಳನ್ನು ಆದ್ಯತೆಯ ಮೇಲೆ ತುಂಬತಕ್ಕದ್ದು ಹಾಗೂ ಉಳಿದ ಖಾಲಿಸ್ಥಾನಗಳನ್ನು ಸಾಂಸ್ಥಿಕ ಸೀಟುಗಳಡಿ ವೈದ್ಯಕೀಯ ಕೋರ್ಸುಗಳನ್ನು ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಂದ ತುಂಬಬಹುದು ಮತ್ತು ಹೆಚ್ಚುವರಿ ಅಭ್ಯರ್ಥಿಗಳನ್ನು ಕಡ್ಡಾಯ ಸೇವೆಯಿಂದ ವಿನಾಯಿತಿಗೊಳಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ "ಸರ್ಕಾರಿ ಸೀಟುಗಳು" ಮತ್ತು "ಸಾಂಸ್ಥಿಕ ಸೀಟುಗಳು" ಎಂಬುದು ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿರ್ಧರಣೆ) ಅಧಿನಿಯಮ, 2006 (2006ರ ಕರ್ನಾಟಕ ಅಧಿನಿಯಮ 8)ರಲ್ಲಿ ಪರಿಭಾಷಿಸಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು."

**4. 4ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರಲ್ಲಿ "ಗ್ರಾಮೀಣ" ಎಂಬ ಪದವನ್ನು ಹಾಗೂ "ನಗರ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(ii) ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಭ್ಯರ್ಥಿಗಳು ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸಿದ ನಂತರ ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡನೆಗೆ ಮತ್ತು ಅಫಿಡವಿಟ್ ಅಥವಾ ಮುಚ್ಚಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ತತ್ಪರಿಣಾಮಗಳಿಗೆ ಹೊಣೆಯಾಗತಕ್ಕದ್ದು ಎಂದು ಮುಚ್ಚಳಿಕೆ ಅಥವಾ ಅಫಿಡವಿಟ್ಟನ್ನು ಸಲ್ಲಿಸಿದ ಮೇಲೆ, ಅವರಿಗೆ ಕಾನೂನು ರೀತ್ಯಾ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಗಳಲ್ಲಿ ಸೂಪರ್ ಸ್ಪೆಷಾಲಿಟಿ ಅಥವಾ ಫೆಲೋಷಿಪ್‌ನಂತಹ ಉನ್ನತ ವ್ಯಾಸಂಗಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಬಹುದು."

**5. 5ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿನ (2)ನೇ ಉಪ-ಪ್ರಕರಣದಲ್ಲಿ,-

(ಎ) ಈಗಾಗಲೇ ಇರುವ ಪರಂತುಕದಲ್ಲಿ "ಗ್ರಾಮೀಣ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(ಬಿ) ಈಗಾಗಲೇ ಇರುವ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಭ್ಯರ್ಥಿಗಳು ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸಿದ ನಂತರ ಒಂದು ವರ್ಷದ ಕಡ್ಡಾಯ ಸೇವೆಯ ಹೊಣೆಗಾರಿಕೆಯನ್ನು ಪೂರೈಸುವ ಅವರ ಬದ್ಧತೆಯನ್ನು ನಮೂದಿಸಿ, ತಪ್ಪಿದಲ್ಲಿ ಆತನು ದಂಡನೆಗೆ ಮತ್ತು ಅಫಿಡವಿಟ್ ಅಥವಾ ಮುಚ್ಚಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ತತ್ಪರಿಣಾಮಗಳಿಗೆ ಹೊಣೆಯಾಗತಕ್ಕದ್ದು ಎಂದು ಮುಚ್ಚಳಿಕೆ ಅಥವಾ ಅಫಿಡವಿಟ್ಟನ್ನು ಸಲ್ಲಿಸಿದ ಮೇಲೆ, ಅವರಿಗೆ ಕಾನೂನು ರೀತ್ಯಾ ಸ್ಥಾಪಿಸಲಾದ ವಿಶ್ವವಿದ್ಯಾನಿಲಯಗಳಲ್ಲಿ ಫೆಲೋಷಿಪ್‌ನಂತಹ ಉನ್ನತ ವ್ಯಾಸಂಗಗಳನ್ನು ಪಡೆಯಲು ಷರತ್ತುಬದ್ಧ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 35 SHASANA 2025, BENGALURU, DATED:27.05.2025**

ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಅಧ್ಯಾದೇಶ, 2025 ಇದಕ್ಕೆ 2025 ರ ಮೇ ತಿಂಗಳ 27ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:06 ಎಂಬುದಾಗಿ ಪ್ರಕಟಿಸಲು ಹಾಗೂ ಭಾರತ ಸಂವಿಧಾನದ ಅನುಚ್ಛೇದ 348ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಸದರಿ ಅಧ್ಯಾದೇಶದ ಆಂಗ್ಲ ಭಾಷಾಂತರವನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ORDINANCE NO. 06 OF 2025

## THE KARNATAKA COMPULSORY SERVICE BY CANDIDATES COMPLETED MEDICAL COURSES (AMENDMENT) ORDINANCE, 2025

(Promulgated by the Governor of Karnataka in the seventy sixth year of the Republic of India and first published in the Karnataka Gazette Extra-ordinary on the 27th day of May, 2025)

An Ordinance further to amend the Karnataka Compulsory Service by Candidates Completed Medical Courses Act, 2012.

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate an Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.-**(1) This Ordinance may be called the Karnataka Compulsory Service by Candidates Completed Medical Courses (Amendment) Ordinance, 2025.

(2) It shall come into force at once.

**2. Amendment of section 3.-** In section 3 of the Karnataka Compulsory Service by Candidates Completed Medical Courses Act, 2012 (Karnataka Act 26 of 2015) (hereinafter referred to as the principal Act),-

(i) in sub-section (1), after the existing proviso, the following proviso shall be inserted, namely:-

"Provided further that, the vacancies in the rural areas shall be filled on priority and in case the number of candidates are more than the vacancies in rural areas then the vacancies in urban areas may be filled by posting of candidates to render one year compulsory service."

(ii) in sub-section (3), the word 'rural' shall be omitted;

(iii) in sub-section (4),-

(a) the word 'rural' shall be omitted;

(b) after the proviso, the following proviso shall be inserted, namely:-

"Provided further that, candidates may be given a conditional No Objection Certificate to pursue higher studies like MD or MS or Fellowship in the universities established by law upon submitting an affidavit or undertaking stating their commitment to fulfill the obligation of one year compulsory service post-completion of higher studies failing which he shall be liable for penalty and such other consequences specified in the affidavit or undertaking."

**3. Insertion of new section 3A.-** In the Principal Act, after section 3, the following shall be inserted, namely:-

"**3A. Priority and exemption.-** Notwithstanding anything contained in this Act, while filing up of existing vacancies specified by the Government for compulsory service in the Government hospitals under sections 3,4 and 5 the candidates who have passed medical courses under Government quota seats shall be filed on priority and the remaining vacancies may be filed by the candidates who have studied medical courses under institutional seats and the surplus candidates may be exempted from the compulsory service.

**Explanation:** For the purpose of this section "Government seats" and the "Institutional seats" shall have the same meaning as defined in the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006)."

**4. Amendment of section 4.-** In section 4 of the Principal Act,-

(i) in sub-section (1), the word 'rural' and the word 'urban' shall be omitted; and

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



(ii) after the proviso, the following proviso shall be inserted, namely:-

"Provided further that, candidates may be given a conditional No Objection Certificate to pursue higher studies like Super-specialty or Fellowship in the universities established by law upon submitting an affidavit or undertaking stating their commitment to fulfill the obligation of one year compulsory service post-completion of the higher studies failing which he shall be liable for penalty and such other consequences specified in the affidavit or undertaking."

**5. Amendment of section 5.-** In section 5 of the principal Act, in sub-section (2),-

(a) in the existing proviso, the word "rural", shall be omitted; and

(b) after the existing proviso, the following proviso shall be inserted, namely:-

"Provided further that, candidates may be given a conditional No Objection Certificate to pursue higher studies like fellowship in the universities established by law upon submitting an affidavit or undertaking stating their commitment to fulfill the obligation of one year compulsory service post-completion of the higher studies failing which he shall be liable for penalty and such other consequences specified in the affidavit or undertaking."

The above translation of ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ಅಧ್ಯಾದೇಶ, 2025 (2025 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 06) be published in the official Gazette under Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
the Governor of Karnataka,

**G. Sridhar**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH